## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಯ, ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆ:-997/2021

ಪ್ರಾಸಾಃ-02 ಚಾಸಾಃ-04

| | | |
|---|---|---|
| ಸಾಕ್ಷಿಯ ಹೆಸರು | : | ಸುಮಂತ್ ಗೌಡಾ |
| ತಂದೆ/ಗಂಡನ ಹೆಸರು | : | ಈಶ್ವರ್ ಗೌಡಾ |
| ವಯಸ್ಸು | : | 45 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಮಹದೇವ ಪೂರ , ಕೂಡ್ಲಿಗಿ ತಾಲೂಕು |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ-**10.11.2022**

## ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ಚಾ.ಸಾ-01 ನನ್ನ ಹೆಂಡತಿ . ಅವರು ಎಸ್.ಸಿ ಜನಾಂಗಕ್ಕೆ ಸೇರಿರುತ್ತಾರೆ. ಆರೋಪಿತರು ಗೊತ್ತಿಲ್ಲ,

ಆರೋಪಿತರು ಹೊಲದ ಹದ್ದುಬಸ್ತಿಗಾಗಿ ಮುಳ್ಳು ಬೇಲಿ ಹಾಕಿ ದಾರಿ ವಿಚಾರವಾಗಿ ನಮ್ಮ ಜೊತೆ ಯಾವುದೇ ದ್ವೇಷವನ್ನು ಇಟ್ಟುಕೊಂಡಿಲ್ಲ. ಆರೋಪಿತರು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಕಟ್ಟಿಗೆ , ಮಚ್ಚು , ಕಲ್ಲುಗಳಿಂದ ಹೊಡೆ - ಬಡೆ ಮಾಡಿರುವುದಿಲ್ಲ.

ನನ್ನ ಹೆಂಡತಿಗೆ ಅವ್ಯಾಚ ಶಬ್ದಗಳಿಂದ ಬೈದು , ಜಾತಿ ನಿಂದನೆಯನ್ನು ಮಾಡಿಲ್ಲ , ಚಾ.ಸಾ-01 ರವರನ್ನು ಎಳೆದಾಡಿ ಅವಮಾನವನ್ನುಪಡಿಸಿರುವುದಿಲ್ಲ ಮತ್ತು ನಮ್ಮ ಮನೆಗೆ ಮತ್ತೆ ಮೊಟರ್ ಸೈಕಲ್ ಗೆ ಹಾನಿಪಡಿಸಿರುವುದಿಲ್ಲ . ನಾನು ಆ ಕುರಿತಂತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ.

ನಮಗೂ ಮತ್ತು ಆರೋಪಿತರಿಗೂ ಬಾಯಿ ಮಾತಿನ ಜಗಳವಾಗಿದ್ದು ಆ ಕುರಿತಂತೆ ಪೋಲೀಸರಿಗೆ ವಿಷಯವನ್ನು ತಿಳಿಸಿರುತ್ತೇವೆ. ಅಷ್ಟನ್ನು ಹೊರತುಪಡಿಸಿ ನನಗೆ ಬೇರೆನೂ ಗೊತ್ತಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ) .

## ಪಾಟೀ ಸವಾಲುಃ ವಿಶೇಷ ಅಭಿಯೋಜಕರವರಿಂದಃ

ದಿನಾಂಕಃ-10.08.2020 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ-08.08.2020 ರಂದು ಮಧ್ಯಾಹ್ನ 12.00 ಸಮಯದಲ್ಲಿ ನಮ್ಮ ಹೊಲದ ಹದ್ದುಬಸ್ತಿಗಾಗಿ ಮುಳ್ಳು ಬೇಲಿ ಹಾಕಿದ್ದಕ್ಕೆ ಆರೋಪಿತರು ಅಲ್ಲಿಂದಲೇ ತಮ್ಮ ಹೊಲಕ್ಕೆ ಹೊಗುವ ಕುರಿತು ಇದ್ದ ದ್ವೇಷದಿಂದ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಆ ದಿನ ರಾತ್ರಿ 08.30 ಗಂಟೆಗೆ ಜಗಳವನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಅಕ್ರಮ ಕೂಟವನ್ನು ರಚಿಸಿಕೊಂಡು ಆರೋಪಿ 4 ತನ್ನ ಕೈಯಲ್ಲಿ ಕಟ್ಟಿಗೆಯನ್ನು , ಆರೋಪಿ 5 ಮತ್ತು 7 ಕಲ್ಲುಗಳನ್ನು , ಆರೋಪಿ 6 ಕಬ್ಬಿಣದ ಮಚ್ಚನ್ನು ಹಿಡಿದುಕೊಂಡು ಬಂದು ಉಳಿದವರು ಕೈಯಲ್ಲಿ ಖಾರದ ಪುಡಿಯನ್ನು ಹಿಡಿದು ಮನೆಯಲ್ಲಿ ಇದ್ದ ಚಾ.ಸಾ-01 ರವರಿಗೆ ಏ ತುಡಿಗಿ ಮದಿಗ ಸೂಳೆ ಎಂದು ಅವ್ಯಾಚ ಶಬ್ದಗಳಿಂದ ಬೈದು ಜಾತಿ ನಿಂದನೆಯನ್ನು ಮಾಡಿ ಅವರ ಹೆಣ್ಣುತನಕ್ಕೆ ಅವಮಾನವನ್ನು ಪಡಿಸಿದ್ದರು ಎಂದರೆ ಸರಿಯಲ್ಲ. ಆರೋಪಿ 2, 3 ಮತ್ತು 8 ಜಾತಿ ನಿಂದನೆಯನ್ನು ಮಾಡಿ ಚಾ.ಸಾ-01 ರವರ ಕೈ ಹಿಡಿದು ಎಳೆದಾಡಿ ದುಪಟ್ಟ ಜಗ್ಗುತ್ತಿದ್ದಾಗ ನಾನು ಬಿಡಿಸಲು ಬಂದಾಗ ಎಲ್ಲಾರು ನನ್ನನ್ನು ನೆಲಕ್ಕೆ ಕೆಡವಿ ಆರೋಪಿ 1 ಕುತ್ತಿಗೆ ಮೇಲೆ ಕಾಲಿಟ್ಟು ಕೊಲೆ ಮಾಡಲು ಪ್ರಯತ್ನಿಸಿದ್ದ ಎಂದರೆ ಸರಿಯಲ್ಲ. ಆರೋಪಿ 9 ನನ್ನ ಎಡಗೈ ತಿರುವಿ ಚಾ.ಸಾ-01 ರವರಿಗೆ ನಿನ್ನ ಗಂಡ ಸತ್ತು ಹೋಗುತ್ತಾನೆ ಊರಲ್ಲಿ ನಾವೇ ಗಂಡು ಮಕ್ಕಳು ಎಂದು ಹೇಳುತ್ತಿದ್ದಾಗ ನನ್ನನ್ನು ಆರೋಪಿ 4 ರಿಂದ ವು ರವರು ಕೊಲೆ ಮಾಡುವುದಾಗಿ ಆರೋಪಿತರು ಬೆದರಿಕೆಯನ್ನು ಹಾಕಿದ್ದರು ಎಂದರೆ ಸರಿಯಲ್ಲ. ನಾವು ಬಾಗಿಲು ಹಾಕಿಕೊಂಡಿದ್ದರು ಸಹ ಬಾಗಿಲಿಗೆ ಕಲ್ಲುಗಳಿಂದ ಹೊಡೆದು ಹಾನಿ ಗೊಳಿಸಿದ್ದು , ಮತ್ತು ಮೊಟರ್ ಸೈಕಲ್ ಗೆ ಕಟ್ಟಿಗೆ ಮತ್ತು ಕಲ್ಲಿನಿಂದ ಜಜ್ಜಿ ಸುಮಾರು 600 ರೂಪಾಯಿ ಹಾನಿ ಪಡಿಸಿದ್ದರು. ಮತ್ತು ದೂರನ್ನು ನೀಡಿದಲ್ಲಿ ನಿಮ್ಮನ್ನು ಮುಗಿಸುತ್ತೆವೆ ಎಂದು ಜೀವ ಬೆದರಿಕೆಯನ್ನು ಹಾಕಿದ್ದರು ಎಂದರೆ ಸರಿಯಲ್ಲ.

ಆ ಕುರಿತಂತೆ ಈಗ ನಾನು ಓದಿ ಹೇಳಿದ ನಿ.ಪಿ-05 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.

ಆರೋಪಿತರು ನಮ್ಮ ಮೇಲೆ ಒಂದು ಪ್ರತಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ . ಆ ಕಾರಣಕ್ಕೆ ನಾವುಗಳು ರಾಜಿಯಾಗಿ ಆರೋಪಿತರು ನಮಗೆ ಏನೂ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯಯವನ್ನು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ.ಎ.ಜೆ.ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.